
ಕರ್ನಾಟಕ ಸರ್ಕಾರ

# ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ಹಾಗೂ

# ತೋಟಗಾರಿಕೆ ಇಲಾಖೆ, ದಾವಣಗೆರೆ

# ಮನೆಮನೆಯಲ್ಲಿ ಔಷಧಿವನ : ಮನೆಮಂದಿಗೆಲ್ಲ ಆರೋಗ್ಯ ಜೀವನ



ಹಸ್ತ ಪತ್ರಿಕೆ

ಏಪ್ರಿಲ್, 2010

ಲೇಖಕರು :

ಶ್ರೀ ಬಸವನಗೌಡ ಎಂ. ಜಿ.

ಡಾ|| ಪ್ರದೀಪ್ ಎಚ್. ಎಂ.

ಡಾ|| ದೇವರಾಜ ಟಿ. ಎನ್.

**ಪ್ರಾಯೋಜಕರು**

**ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಯ**
**" Conservation, Development and Sustainable Management of Medicinal Plants "**
**ಯೋಜನೆ**

ಇತ್ತೀಚಿನ ವರ್ಷಗಳಲ್ಲಿ ಜಗತ್ತಿನಾದ್ಯಂತ ಸಸ್ಯ ಮೂಲ ಔಷಧಿ ವಸ್ತುಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಇದಕ್ಕೆ ಕಾರಣ ಹೆಚ್ಚುತ್ತಿರುವ ಜನಸಂಖ್ಯೆ, ನಗರೀಕರಣ, ಉನ್ನತ ಜೀವನ ಮಟ್ಟ ಮತ್ತು ನವೀನ ವೈದ್ಯಕೀಯ ಚಿಕಿತ್ಸಾ ಕ್ರಮಗಳಲ್ಲಿ ಬಳಸುತ್ತಿರುವ ಕೃತಕ ರಾಸಾಯನಿಕ ವಸ್ತುಗಳಿಂದ ದೇಹದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳು ಎಂದು ಹೇಳಬಹುದು.

ಔಷಧಿ ಸಸ್ಯಗಳು ನಮ್ಮಲ್ಲಿ ನಿಸರ್ಗದತ್ತವಾಗಿ ಬಂದ ಬಳುವಳಿಯಾಗಿದೆ ಹಾಗೂ ಇವುಗಳನ್ನು ಸತತವಾಗಿ ನಮ್ಮ ಸಂಪದ್ಭರಿತ ಕಾಡುಗಳು ಪೂರೈಸುತ್ತಿವೆ. ನಿಸರ್ಗದಲ್ಲಿ ದೊರೆಯುವ ಈ ವನಸ್ಪತಿ ಸಂಪನ್ಮೂಲಗಳನ್ನು ವಿವೇಚನೆಯಿಲ್ಲದೆ ಕಿತ್ತು ಬಳಸುತ್ತಿರುವ ಕಾರಣ ಅವು ಸಂಪೂರ್ಣವಾಗಿ ಕಣ್ಮರೆಯಾಗುವ ಸಾಧ್ಯತೆಯಿದೆ. ಈ ನಿಟ್ಟಿನಲ್ಲಿ ನಮ್ಮ ಮನೆಯ ಸುತ್ತಮುತ್ತ ಸ್ಥಳೀಯವಾಗಿ ದೊರೆಯುವ ಔಷಧಿ ಗಿಡಗಳನ್ನು ಬೆಳಸಿ, ಸಂರಕ್ಷಿಸುವಲ್ಲಿ ನಾವು ಹೆಚ್ಚಿನ ಗಮನಹರಿಸಬೇಕಾಗುತ್ತದೆ.

ಮಾನವ ಜನಾಂಗದ ನಾಗರೀಕತೆಯ ಪ್ರಾರಂಭದೊಂದಿಗೆ ಸಸ್ಯಮೂಲ ಔಷಧಿಗಳ ಬಳಕೆಯೂ ಸಹ ಪ್ರಾರಂಭಗೊಂಡಿತು. ಇಪ್ಪತ್ತನೆಯ ಶತಮಾನದಲ್ಲಿ ಕೃತಕ (Synthetic) ಹಾಗೂ ಅಜೈವಿಕ ಗುಣಗಳನ್ನು ಹೊಂದಿರುವ ಔಷಧಿಗಳ ಉತ್ಪತ್ತಿ ಬಹಳಷ್ಟು ಇದ್ದಾಗ್ಯೂ ಸಹ ಜಗತ್ತಿನಾದ್ಯಂತ ಸಸ್ಯಗಳು ಔಷಧಿಗಳ ಪ್ರಧಾನ ಮೂಲವಾಗಿಯೇ ಉಳಿದಿವೆ. ಒಟ್ಟಾರೆ ಹೇಳುವುದಾದರೆ ಒಟ್ಟು ಔಷಧಿಗಳ ಮೂರರ ಒಂದು ಭಾಗ ಸಸ್ಯಮೂಲಗಳಿಂದಲೇ ಉತ್ಪತ್ತಿಯಾಗುತ್ತದೆ. ಶಿಲೀಂದ್ರ ಮತ್ತು ಅಣುಜೀವಿಗಳನ್ನೊಳಗೊಂಡರೆ ಶೇ. 60 ಕ್ಕೂ ಮೇಲ್ಪಟ್ಟು ಔಷಧಿಗಳು ಸಸ್ಯಮೂಲಗಳಿಂದ ಉತ್ಪತ್ತಿಯಾದವುಗಳು.


ರಾಸಾಯನಿಕವಾಗಿ ಈ ಗಿಡಮರಗಳು ಔಷಧಿ ಗುಣಗಳನ್ನು ಬೀರಲು ಕಾರಣ, ಅವುಗಳಲ್ಲಿನ ಕ್ರಿಯಾಸಕ್ತ ಮೂಲವಾಗಿರುವ ಸಸ್ಯಕ್ಷಾರ (Alkaloid), ಗ್ಲಯಾಕೊಸೈಡ್ ಅಥವಾ ಮತ್ತಿತರ ಗುಂಪಿಗೆ ಸೇರಿದ ವಸ್ತುಗಳನ್ನು ಅವಲಂಭಿಸಿರುತ್ತವೆ. ಅವು ಕ್ಯಾನ್ಸರ್ ಮತ್ತು ಮಲೇರಿಯಾ ನಿರೋಧಕ, ಜಂತುನಾಶಕ, ಇತ್ತೀಚಿಗೆ ಪ್ರಚಲಿತವಿರುವ ಹಂದಿಜ್ವರ ನಿರೋಧಕ, ವಿರೇಚನಗಳನ್ನು ತಡೆಯುವ ಗುಣಗಳಿಂದ ಕೂಡಿದ ಸುಗಂಧ ತೈಲಗಳು, ಟ್ಯಾನಿನ್ ಪದಾರ್ಥಗಳ ಹಾಗೂ ವನಸ್ಪತಿ ತೈಲಗಳಿಂದ ಕೂಡಿದವುಗಳಾಗಿರುತ್ತವೆ. ಅವುಗಳೆಲ್ಲವನ್ನೂ ವಿವಿಧ ಔಷಧಿಗಳಲ್ಲಿ ಬಳಸಲಾಗುತ್ತಿದೆ.

ಮಾನವನು ತನ್ನ ಕಾಯಿಲೆಗಳನ್ನು ಗುಣಪಡಿಸಿಕೊಳ್ಳಲು ಸಸ್ಯ ಮೂಲಿಕೆಗಳನ್ನು ಆದಿಕಾಲದಿಂದಲೂ ಬಳಸುತ್ತಲೇ ಬಂದಿದ್ದಾನೆ. ಪೂರ್ವಿಕರು ಯುದ್ಧದಲ್ಲಿ ಗಾಯಗೊಂಡಾಗ, ಇಲ್ಲವೇ ಜಾರಿ ಬಿದ್ದು ಕೈ ಕಾಲುಗಳಿಗೆ ಗಾಯಗಳಾದಾಗ, ರಕ್ತಸ್ರಾವವನ್ನು ತಡೆಗಟ್ಟಲು, ಇಲ್ಲವೇ ನೋವನ್ನು ಉಪಶಮನ ಮಾಡಲು ಕೆಲವೊಂದು ಗಿಡಗಳ ಎಲೆಗಳನ್ನು ನುಣ್ಣಗೆ ಕುಟ್ಟಿ ಪುಡಿಮಾಡಿ, ಹೊದಿಸಿ ಕಟ್ಟುತ್ತಿದ್ದರು. ಪ್ರಾಣಿಗಳಿಂದಲೂ ಸಹ ಇಂತಹ ರಹಸ್ಯಗಳನ್ನು ತಿಳಿಯಬಹುದು. ಸಾಕು ಪ್ರಾಣಿಗಳಾದ ನಾಯಿ ಅಥವಾ ಬೆಕ್ಕುಗಳು ಅಜೀರ್ಣ ತೊಂದರೆಯಿಂದ ಬಳಲುತ್ತಿದ್ದರೆ ಹೊರಗೋಡಿ ಹುಲ್ಲು ಅಥವಾ ಮತ್ತಾವುದಾದರೂ ಮೂಲಿಕೆಗಳನ್ನು ಕಚ್ಚಿತಿಂದು ನೋವನ್ನು ನೀಗಿಸಿಕೊಳ್ಳುವುದನ್ನು ಕಾಣಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಹತ್ತಾರು ಉದಾಹರಣೆಗಳು ನಮಗೆ ಸಿಗುತ್ತವೆ.

ಪ್ರಸಕ್ತ ದಿನಗಳಲ್ಲಿ ನಮ್ಮ ದೇಶದಲ್ಲಿ ನಮಗೆ ಸಾಕಾಗುವಷ್ಟು ಔಷಧೀಯ ಪದಾರ್ಥಗಳು ಉತ್ಪಾದನೆಯಾಗುತ್ತಿಲ್ಲ. ಬಹಳಷ್ಟು ಮೌಲ್ಯದ ಔಷಧಿಗಳನ್ನು ಇತರ ದೇಶಗಳಿಂದ ಕೊಂಡು ಪೂರೈಸಬೇಕಾಗಿದೆ. ಇದನ್ನು ತಡೆಗಟ್ಟಲು ಕಚ್ಚಾವಸ್ತುಗಳನ್ನು ನಮ್ಮಲ್ಲಿಯೇ ಉತ್ಪತ್ತಿಮಾಡಬೇಕು. ಈ ವಸ್ತುಗಳಿಗೆ ಇರುವ ಬೇಡಿಕೆ ದಿನೇ ದಿನೇ ಏರುತ್ತಿದೆ. ಪ್ರಸಕ್ತ ವರ್ಷಗಳಲ್ಲಿ ಯಾವುದೇ ರಾಷ್ಟ್ರ ಮುಂದುವರೆಯಲು ಅದು ಔಷಧಿಗಳಿಗಾಗಿ ವ್ಯಯಿಸುತ್ತಿರುವ ವೆಚ್ಚಕ್ಕೆ ನೇರ ಸಂಬಂಧವನ್ನು ಹೊಂದಿರುತ್ತದೆ. ಜನ ಜೀವನಮಟ್ಟ ಏರಿದಂತೆಲ್ಲಾ ಔಷಧಿಗಳಿಗೆ ಇರುವ ಬೇಡಿಕೆ ಹೆಚ್ಚುತ್ತಾ ಹೋಗುತ್ತಿದೆ.


ಸಸ್ಯ ಮೂಲಿಕೆ ಔಷಧಗಳನ್ನು ಹಿಂದೂ ವೈದ್ಯ ಪದ್ಧತಿಯಲ್ಲಿ ಬಹುಕಾಲದಿಂದ ಬಳಸುತ್ತಾ ಬಂದಿದ್ದೇವೆ. ಜನ ಸಾಮಾನ್ಯ ತೊಂದರೆಗಳಾದ ಜ್ವರ, ನೆಗಡಿ, ಕೆಮ್ಮು, ಭೇದಿ, ಅತಿಸಾರ, ಕಾಲುನೋವು, ತಲೆನೋವು, ಚರ್ಮರೋಗ, ಜಂತು ಸಮಸ್ಯೆ, ಅಲ್ಸರ್, ತುರಿಕೆ, ಅಂಟು ವ್ಯಾಧಿಗಳು ಇನ್ನು ಇತರೆ ರೋಗಗಳಿಗೆ ಮನೆಮದ್ದು ಉಪಯೋಗವಾಗುತ್ತದೆ. ಕೆಲವು ಔಷಧಿ ಗಿಡಗಳ ಉಪಯೋಗಿಸುವ ಭಾಗ ಹಾಗೂ ಉಪಯೋಗಗಳನ್ನು ವಿವರಿಸಲಾಗಿದೆ.

**ಬೆಟ್ಟದ ನೆಲ್ಲಿ – ಕಾಯಿ**




ಶಕ್ತಿವರ್ಧಕ, ಅಂಗಾಲು, ಅಂಗೈ ಉರಿ ನಿವಾರಕ, ಅಕಾಲಿಕ ಮುಪ್ಪನ್ನು ನಿವಾರಿಸುತ್ತದೆ

**ಶತಾವರಿ – ಬೇರು**



ತಾಯಿಯ ಎದೆಹಾಲನ್ನು ವೃದ್ಧಿಸುತ್ತದೆ, ಶಕ್ತಿವರ್ದಕ, ಜ್ವರ ನಾಶಕ.

**ಸೋನಾ ಮುಖಿ**
**ಎಲೆ ಮತ್ತು ಕಾಯಿ**




ಮಲಬದ್ಧತೆ ನಿವಾರಣೆ.

**ಬೆಳ್ಳುಳ್ಳಿ – ಗೆಡ್ಡೆ**



ಕೆಮ್ಮು, ವಾತ, ಕ್ಷಯರೋಗ.

**ಕಸ್ತೂರಿ ಬೆಂಡೆ–ಬೀಜ**



ಸುಗಂಧ ತೈಲ, ಸೌಂದರ್ಯವರ್ಧಕ, ಅಗರಬತ್ತಿ ತಯಾರಿಕೆ.

**ಸ್ಟೀವಿಯಾ – ಎಲೆ**




ಸಕ್ಕರೆ ಬಾಯಿಲೆ.

**ಗೋರಂಟೆ (ಮದರಂಗಿ)**
ಸೊಪ್ಪು




ದೇಹದ ಉಷ್ಣತೆ ನಿವಾರಣೆ,
ಕೇಶಕ್ಕೆ ತಂಪು

**ನುಗ್ಗೆ**
ಕಾಯಿ ಮತ್ತು ಸೊಪ್ಪು




ಬಾಣಂತಿಯ ಎದೆಹಾಲು ವೃದ್ಧಕ,
ದೇಹಕ್ಕೆ ಲಘುಪೋಷಕಾಂಶಗಳ ಪೂರೈಕೆ

**ದಾಳಿಂಬೆ**
ಹಣ್ಣು, ಹಣ್ಣಿನ ಸಿಪ್ಪೆ



ಭೇದಿ, ಹೊಟ್ಟೆನೋವು,
ಜಂತುಹುಳ ನಿವಾರಕ

**ಕರಿಬೇವು** – ಎಲೆ



ಮಧುಮೇಹ ನಿವಾರಕ, ಬೊಜ್ಜು
ಕರಗಿಸುವುದು, ತಲೆಕೂದಲು
ಬೆಳವಣಿಗೆಗೆ ಹಿತಕಾರಿ

**ಮಧುನಾಶಿನಿ**
ಎಲೆ ಮತ್ತು ಕಾಂಡ



ಮಧುಮೇಹ ನಿವಾರಕ.

**ಆಡುಸೋಗೆ** – ಹೂವು




ಕೆಮ್ಮು, ದಮ್ಮು, ಜ್ವರ,
ಚರ್ಮವ್ಯಾದಿ ನಿವಾರಕ

**ನೆಲಬೇವು**
ಸೊಪ್ಪು ಮತ್ತು ಕಾಂಡ



ಜ್ವರ, ಮಧುಮೇಹ,
ಅಲರ್ಜಿಯನ್ನು ನಿವಾರಿಸುತ್ತದೆ

**ದಾಸವಾಳ** – ಹೂ ಮತ್ತು ಎಲೆ



ಕೇಶದ ಅಲಂಕಾರ, ಅಂಗೈ ಉರಿ
ನಿವಾರಕ, ಸ್ತ್ರೀಯರ ಋತು ಸ್ರಾವದ
ತೊಂದರೆ ನಿವಾರಕ

**ಸೀತಾಫಲ**

ಹಣ್ಣಿನ ಬೀಜ, ಮರದ ಚಕ್ಕೆ.



ಜ್ವರ, ಕೆಮ್ಮು ಮತ್ತು ಕುರಗಳನ್ನು
ನಿವಾರಣೆ ಮಾಡುತ್ತದೆ.


**ಲೋಳೆಸರ**

ಮೇಲಿನ ಪಟ್ಟೆ.



ಚರ್ಮರೋಗ ನಿವಾರಣ,
ಸೋಪು, ಶ್ಯಾಂಪೂ
ತಯಾರಿಕೆ, ಕಾಂತಿವರ್ಧಕ


**ಲಾವಂಚ – ಬೇರು**



ಕೂದಲು ಉದುರುವುದನ್ನು
ತಡೆಯುವುದು.
ನೀರು ಶುದ್ಧೀಕರಣ

**ಒಂದೆಲಗ**


ಬೇರು ಸಮೇತ



ಬುದ್ಧಿವರ್ಧಕ,
ಮೂರ್ಛೆರೋಗ,
ಉನ್ಮಾದ ನಿವಾರಕ


**ಅಮೃತಬಳ್ಳಿ**

ಕಾಂಡ ಮತ್ತು ಸೊಪ್ಪು



ಮಧುಮೇಹ, ಜ್ವರ,
ಮೂಲವ್ಯಾದಿ, ತಲೆನೋವು ನಿವಾರಕ.

**ಬಸಳೆ – ಸೊಪ್ಪು**



ಮಲಬದ್ಧತೆ ನಿವಾರಣೆ,
ಬಾಯಿಹುಣ್ಣು ನಿವಾರಣೆ

**ಅಶ್ವಗಂಧ – ಬೇರು**




ನರಗಳ ದೌರ್ಬಲ್ಯ ನಿವಾರಕ,
ಶಕ್ತಿ ವರ್ಧಕ

**ತುಳಸಿ – ಸೊಪ್ಪು**



ಜ್ವರ, ನೆಗಡಿ,
ಕೆಮ್ಮು ನಿವಾರಕ

**ಕಾಶಿಕಣಗಲೆ – ಎಲೆ**



ಮೂತ್ರೋತ್ತೇಜಕ, ರಕ್ತದ
ಕ್ಯಾನ್ಸರ್, ಮಧುಮೇಹ ನಿವಾರಕ

**ಅಗ್ನಿಶಿಖೆ – ಗಡ್ಡೆ**



ಗರ್ಭನಿರೋಧಕ

**ಇಸಬ್ ಗೋಲ್**
ಬೀಜದ ಹೊಟ್ಟು



ಮಲಬದ್ಧತೆ, ಉದರದ ತೊಂದರೆ,
ಅಲ್ಸರ್, ಗೊನೇರಿಯಾ

**ಉಮ್ಮತ್ತಿ (ದತೂರ)**
ಒಣ ಎಲೆ, ಹೂ ತೆನೆ



ಅಸ್ತಮಾ, ಪಾರ್ಕಿನ್
ಸನ್ ರೋಗ

**ತುರುಚಿ ಅವರೆ (ವೆಲ್ ವೆಟ್ ಬೀನ್) – ಬೀಜ**



ಮಧುಮೇಹ, ಮುಟ್ಟಿನ
ತೊಂದರೆ, ಬಿಳಿಸೆರಗು, ಶಕ್ತಿವರ್ಧಕ

**ಬಜೆ – ಒಣಬೇರು**



ಕೆಮ್ಮು, ಉಬ್ಬಸ ರೋಗ,
ಮೂರ್ಛೆರೋಗ, ಕೀಟನಾಶಕ

**ಮಾಕಂದಿ ಬೇರು – ಬೇರು**



ರಕ್ತದೊತ್ತಡ,
ದೃಷ್ಟಿದೋಷ, ಅಸ್ತಮಾ.

**ಸರ್ಪಗಂಧ –ಬೇರು**



ಹಾವು, ಚೇಳು ಕಡಿತ,
ನರದೌರ್ಬಲ್ಯ

**ತಾಂತ್ರಿಕ ಮಾಹಿತಿಗಾಗಿ ಸಂಪರ್ಕಿಸಿ**

ಕಾರ್ಯಕ್ರಮ ಸಂಯೋಜಕರು
**ತರಳಬಾಳು ಕೃಷಿ ವಿಜ್ಞಾನ ಕೇಂದ್ರ,**
ಎಲ್.ಐ.ಸಿ. ಕಾಲೋನಿ ಲೇ ಔಟ್, ಬಿ.ಐ.ಇ.ಟಿ. ಕಾಲೇಜ್ ರಸ್ತೆ, ದಾವಣಗೆರೆ.
ಫೋ : 08192 - 263462, ಫ್ಯಾಕ್ಸ್ : 08192 - 260969

ಅಶ್ವಿನಿ ಆಫ್‌ಸೆಟ್ ಪ್ರಿಂಟರ್ಸ್, ದಾವಣಗೆರೆ ಫೋ: 253341